

ಕ್ರಾಂತಿಯ ಕಿಡಿ

ಕಾಯಕ ಯೋಗಿ

ಸಂಪಾದಕರು : ಬಿ.ಕೆ. ಅರುಣಜ್ಯೋತಿ
KAYAKAYOGI - Morning Daily
ಕನ್ನಡ ದಿನಪತ್ರಿಕೆ

ಮಂಡ್ಯ Mandya	ಸಂಪುಟ - 04 Volume - 04	ಸಂಚಿಕೆ–112 Issue - 112	RNI No.KARKAN/2018/77805 POST NO. KA/SK/MND/999/2019-2021	ಮಂಗಳವಾರ Tuesday	10-08-2021	ಪುಟ - 04 Page - 04	ಬೆಲೆ–ರೂ. 02 Price - 02	ಸಂಪರ್ಕ 9980605484	E-mail kayakayoginews@gmail.com

askಮೈಸೂರು

ಪರಿಸರ, ಪ್ರವಾಸೋದ್ಯಮ, ಆರೋಗ್ಯ, ವ್ಯವಹಾರ, ಕೃಷಿ, ಶಿಕ್ಷಣ, ಜೀವನ ಶೈಲಿ, ಸಂಸ್ಕೃತಿ, ವನ್ಯಜೀವಿಗಳು, ಸಾಧಕರು, ವ್ಯವಹಾರ ಹಾಗೂ ಉತ್ಪನ್ನಗಳ ಮಾಹಿತಿ, ಸುದ್ದಿ ಮತ್ತು ಜಾಹಿರಾತುಗಳು.

FREE CLASSIFIEDS
Visit: askmysuru.com/news
9742 9742 34 askmysuru

ನರೇಗಾ ಯೋಜನೆಯಡಿ ಉದ್ಯೋಗ ಅಭಿಯಾನ

ಎಸ್‌ಬಿಎಂ, ಜೆಜೆಎಂ ಪ್ರಗತಿ ಪರಿಶೀಲನೆ : ನಿರಿಕ್ಷೀತ ಪ್ರಗತಿ ಸಾಧಿಸಲು ಪಿಡಿಓಗಳಿಗೆ ಸಿಇಓ ದಿವ್ಯಾ ಪ್ರಭು ಸೂಚನೆ

ಮಂಡ್ಯ : ಜಿಲ್ಲೆಯಲ್ಲಿ ವಾಸವಿರುವ ಎಲ್ಲಾ ಅರ್ಹ ಗ್ರಾಮೀಣ ಕುಟುಂಬಗಳ ಫಲಾನುಭವಿಗಳಿಗೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಸೆಪ್ಟೆಂಬರ್ ಮಾಹೆಯಲ್ಲಿ 'ಉದ್ಯೋಗ ಅಭಿಯಾನ' (ಎನ್‌ಎಂಆರ್ ಅಭಿಯಾನ) ಹಮ್ಮಿಕೊಳ್ಳಲಾಗುವುದು ಎಂದು ಜಿಲ್ಲಾ ಪಂಚಾಯತ್ ಸಿಇಓ ಜಿಆರ್‌ಜೆ ದಿವ್ಯಾ ಪ್ರಭು ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ನಡೆದ ಮಹಾತ್ಮ ಗಾಂಧಿ ನರೇಗಾ ಯೋಜನೆ, ಸ್ವಚ್ಛ ಭಾರತ್ ಮಿಷನ್ ಹಾಗೂ ಜನ ಜೀವನ್ ಮಿಷನ್ ಯೋಜನೆಗಳ ಪ್ರಗತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಯೋಜನೆಯಡಿ ಕಳೆದ ಜೂನ್ ಮಾಹೆಯಲ್ಲಿ ಉದ್ಯೋಗ ಚೀಟಿ ಮೇಳ ನಡೆಸಲಾಗಿದ್ದು, ಈ ವೇಳೆ ಹೊಸದಾಗಿ ಉದ್ಯೋಗ ಚೀಟಿ ಪಡೆದ ಎಲ್ಲಾ ಕುಟುಂಬಗಳಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಪಿಡಿಓಗಳು ಅಗತ್ಯ ಕ್ರಮವಹಿಸಬೇಕು ಎಂದು ಸಿಇಓ ಸೂಚಿಸಿದರು.

ಮೇಟ್ ಗುರುತಿಸಿ : ಪ್ರತಿ ಗ್ರಾಮ ಪಂಚಾಯಿತಿಯಲ್ಲೂ 25 ಜನರ ಕೂಲಿಕಾರರ ಗುಂಪಿಗೆ ಒಬ್ಬರು ಮೇಟ್ ಅನ್ನು ನೇಮಿಸಿ, ಗುರುತಿನ ಚೀಟಿ ನೀಡಿ ಅವರಿಗೆ ತರಬೇತಿ ನೀಡಬೇಕು. ಆ ಮೂಲಕ ನರೇಗಾ ಯೋಜನೆಯಡಿ ಹೆಚ್ಚಿನ ಜನರು ಪ್ರಯೋಜನ ಪಡೆಯುವಂತಾಗಬೇಕು ಎಂದು ತಿಳಿಸಿದರು.

ಕೋವಿಡ್ ಕಾರಣದಿಂದಾಗಿ ಜಿಲ್ಲೆಯಲ್ಲಿ ನರೇಗಾ ಯೋಜನೆಯಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸದ ಗ್ರಾಮ ಪಂಚಾಯಿತಿಗಳು, ಆಗಸ್ಟ್ ಅಂತ್ಯದೊಳಗೆ ಕಡ್ಡಾಯವಾಗಿ ಗುರಿಗೆ ಅನುಗುಣವಾಗಿ ಪ್ರಗತಿ ಸಾಧಿಸಲು ಕ್ರಮವಹಿಸಿಬೇಕು ಎಂದು ಅವರು ನಿರ್ದೇಶನ ನೀಡಿದರು.

ಜಲ ಜೀವನ ಮಿಷನ್ ಯೋಜನೆ : ಜೆಜೆಎಂ ಯೋಜನೆಯ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತ್‌ಗಳು 15ನೇ ಹಣಕಾಸು ಯೋಜನೆಯ ಮೊತ್ತವನ್ನು ಇದೇ ಆಗಸ್ಟ್ 16ರ ಒಳಗೆ ಕಾರ್ಯಪಾಲಕ ಅಭಿಯಂತರರ ಕಛೇರಿಯ ಖಾತೆಗೆ ವರ್ಗಾವಣೆ ಮಾಡಬೇಕು. ಈ ಯೋಜನೆಯ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತ್‌ಗಳು ಶೇಕಡ 10ರಷ್ಟು ಸಾರ್ವಜನಿಕ ವಂತಿಗೆ ಹಣವನ್ನು ಸಂಗ್ರಹಿಸಲು ತುರ್ತು ಕ್ರಮವಹಿಸಬೇಕು ಹಾಗೂ ಈ ಮಾಸಾಂತ್ಯದೊಳಗೆ ರೂ.2 ಕೋಟಿಯಷ್ಟು ಸಮುದಾಯ ವಂತಿಗೆಯನ್ನು ಸಂಗ್ರಹಣೆ ಮಾಡಬೇಕು ಎಂದು ಸಿಇಓ ಸೂಚಿಸಿದರು.

ಸ್ವಚ್ಛ ಭಾರತ್ ಮಿಷನ್ : ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ನಿರ್ಮಾಣವಾಗುತ್ತಿರುವ ಘನ ತ್ಯಾಜ್ಯ ನಿರ್ವಹಣಾ ಘಟಕಗಳ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಕ್ರಮವಹಿಸಬೇಕು ಹಾಗೂ ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಮತ್ತು ಪ್ರೋತ್ಸಾಹಧನ ಪಾವತಿಯನ್ನು ಒಂದು ತಿಂಗಳೊಳಗಾಗಿ ಪೂರ್ಣಗೊಳಿಸಬೇಕು ಹಾಗೂ ಎಲ್ಲಾ ಗ್ರಾಮ ಪಂಚಾಯತ್‌ಗಳು ಒಂದು ವಾರದೊಳಗೆ ನಿಯಮಾನುಸಾರ ಇನ್ಸಿನರೇಟರ್‌ಗಳನ್ನು ಅಳವಡಿಸಿ ವರದಿ ಸಲ್ಲಿಸಬೇಕು ಎಂದು ಸಿಇಓ ದಿವ್ಯಾ ಪ್ರಭು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ (ಅಭಿವೃದ್ಧಿ) (ಪ್ರಭಾರ) ಎ.ಎಸ್.ಸುಬ್ರಹ್ಮಣ್ಯ ಶರ್ಮ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು ಹಾಗೂ ಪಿಡಿಓಗಳು ಹಾಜರಿದ್ದರು.

ಎರೆಹುಳು ಗೊಬ್ಬರ ಘಟಕ ಅಭಿಯಾನ : ರೈತನ ಮಿತ್ರ, ರೈತ ಬಂಧು ಎಂದೇ ಕರೆಯಲ್ಪಡುವ ಎರೆಹುಳುಗಳಿಂದ ಸಾವಯವ ಗೊಬ್ಬರ ತಯಾರಿಕೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಇದೇ ಆಗಸ್ಟ್ 15ರಿಂದ 'ರೈತ ಬಂಧು ಅಭಿಯಾನ'ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಇಓ ದಿವ್ಯಾ ಪ್ರಭು ತಿಳಿಸಿದ್ದಾರೆ.

75ನೇ ಸ್ವಾತಂತ್ರ್ಯೋತ್ಸವದ 'ಆಜಾದಿ ಕಾ ಅಮೃತ ಮಹೋತ್ಸವ' ಅಂಗವಾಗಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಆಗಸ್ಟ್ 15 ರಿಂದ ಅಕ್ಟೋಬರ್ 15ರವರೆಗೆ ಎರಡು ತಿಂಗಳ ಅವಧಿವರೆಗೆ ಅಭಿಯಾನ ನಡೆಯಲಿದ್ದು, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಸ್ಥಳೀಯ ಜನಪ್ರತಿನಿಧಿಗಳ ನೇತೃತ್ವದಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಗುವುದು.

ಪ್ರತಿ ಗ್ರಾಮ ಪಂಚಾಯಿತಿಗೆ ಕನಿಷ್ಠಾ 25 ರಂತೆ ಜಿಲ್ಲೆಯಾದ್ಯಂತ 233 ಗ್ರಾಮ ಪಂಚಾಯಿತಿಗಳಲ್ಲಿ 5825 ಎರೆಹುಳು ತೊಟ್ಟಿ ನಿರ್ಮಾಣ ಗುರಿಯನ್ನು ಸರ್ಕಾರ ನೀಡಿದ್ದು, ಎರಡು ಅಳತೆಯ ಎರೆಹುಳು ಘಟಕಗಳ ನಿರ್ಮಾಣಕ್ಕೆ ತಲಾ ರೂ.27 ಸಾವಿರ ಹಾಗೂ ರೂ.21 ಸಾವಿರ ಅನುದಾನ ನೀಡಲಾಗುತ್ತದೆ.

ಸಿಎಂ ಬೊಮ್ಮಾಯಿಗೆ ಬಿಜೆಪಿ ಅಭಿನಂದನೆ

ನಗರಸಭೆ ಸದಸ್ಯರಿಗೆ ನಿರಾಸೆ

ಮಂಡ್ಯ : ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿದ್ದ ಸಿಎಂ ಬಸವರಾಜ್ ಬೊಮ್ಮಾಯಿ ಅವರನ್ನು ನಗರದ ಜೆ.ಸಿ. ವೃತ್ತದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರು, ಮುಖಂಡರು, ಕಾರ್ಯಕರ್ತರು ಅಭಿನಂದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು, ಅಕ್ರಮ ಗಣಿಗಾರಿಕೆ, ಕೃಷ್ಣರಾಜಸಾಗರ ಜಲಾಶಯ ರಕ್ಷಣೆ ಮತ್ತು ಮೈಷುಗರ್ ಸೇರಿದಂತೆ ರೈತರ ಜ್ವಲಂತ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಕಂಡುಕೊಳ್ಳುವುದಾಗಿ ಭರವಸೆ ನೀಡಿದರು.

ಕೆ.ಆರ್.ಎಸ್. ಜಲಾಶಯ ರಕ್ಷಣೆ, ಅಕ್ರಮ ಗಣಿಗಾರಿಕೆ, ಮೈಷುಗರ್ ಪ್ರಾರಂಭ ಸೇರಿದಂತೆ ಜಿಲ್ಲೆಯ ಜ್ವಲಂತ ಸಮಸ್ಯೆಗಳ ಬಗ್ಗೆ ಶೀಘ್ರ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಕೆ.ಜೆ. ವಿಜಯಕುಮಾರ್, ಜಿಲ್ಲಾ ಉಸ್ತುವಾರಿ ಎ.ಮಂಜು, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಡಾ.ಸಿದ್ದರಾಮಯ್ಯ, ಮಾಜಿ ಅಧ್ಯಕ್ಷರು, ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ನಿರಾಸೆ : ನಗರಸಭಾಧ್ಯಕ್ಷ ಎಚ್.ಎಸ್.ಮಂಜು ನೇತೃತ್ವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಗೌರವ ಸಲ್ಲಿಸಲು ಬೆಂಗಳೂರು–ಮೈಸೂರು ಹೆದ್ದಾರಿಯ ನಗರಸಭೆ ಮುಂಭಾಗದಲ್ಲಿ ಸದಸ್ಯರು, ಅಧಿಕಾರಿಗಳು ಕಾದು ನಿಂತಿದ್ದರು. ಆದರೆ ಮುಖ್ಯಮಂತ್ರಿಗಳ ಕಾರು ನಿಲ್ಲಿಸದೆ ಅತಿ ವೇಗವಾಗಿ ತೆರಳಿದ್ದು ನಿರಾಸೆ ಮೂಡಿಸಿತ್ತಲ್ಲದೆ ಆಕ್ರೋಶಕ್ಕೂ ಕಾರಣವಾಯಿತು.

ಆಧುನೀಕತೆಯ ಅಬ್ಬರದಲ್ಲಿ ಜನಪದ ಶೈಲಿ ಕ್ಷೀಣ

ಶಾಸಕ ಸಿ.ಎಸ್.ಪುಟ್ಟರಾಜು ವಿಷಾದ

ಮಂಡ್ಯ : ಜಾನಪದರ ಸುಸಂಸ್ಕೃತ ಜೀವನಶೈಲಿಯೇ ಸರ್ವಶ್ರೇಷ್ಠವಾಗಿತ್ತು ಆಧುನಿಕತೆ ಹೆಸರಿನಲ್ಲಿ ಪಾಶ್ಚಾತೀಕರಣಗೊಳ್ಳುತ್ತಿರುವುದು ಸರಿಯಲ್ಲ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ತಾಲೂಕಿನ ಸಂಪಹಳ್ಳಿಯಲ್ಲಿ ಭಾರತ@75ನೇ ಸ್ವಾತಂತ್ರ್ಯ ಅಮೃತಮಹೋತ್ಸವ ಅಂಗವಾಗಿ ಜಿಲ್ಲಾ ಡಳಿತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶ್ರೀಮಲೆ ಮಹದೇಶ್ವರ ಜಾನಪದ ಸುಗಮ ಸಂಗೀತ ಅಕಾಡೆಮಿ ತಂಡ ಹೆಮ್ಮಿಗೆ ಆಯೋಜಿಸಿದ್ದ ದೇಶಭಕ್ತಿ ಗೀತ ಗಾಯನ ಹಾಗೂ ಜಾನಪದಸಿರಿ ಸಂಭ್ರಮ–2021 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಪೂರ್ವಜನರ ಕಲೆ, ಸಾಂಸ್ಕೃತಿಕ ವೈಭವ ಇಂದಿನ ಪೀಳಿಗೆ ಮತ್ತು ಮುಂಬರುವ ಜನ ಸಮುದಾಯಕ್ಕೆ ಅತ್ಯವಶ್ಯಕವಾಗಿರುತ್ತದೆ, ಉಳಿಸಿ ಬೆಳೆಸಲು ಇಂತಹ ಜಾಗೃತಿ ಕಾರ್ಯಕ್ರಮಗಳು ಸದಾ ನಡೆಯಬೇಕಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಂಗಭೂಮಿ ಕಲಾವಿದ ಸಂಪಹಳ್ಳಿ ಎಸ್.ಸಿ.ಬಸವರಾಜು ಮಾತನಾಡಿ, ಜಾನಪದ ಸುಸಂಸ್ಕೃತಿ ಬದುಕನ್ನು ಇಂದಿನ ಯುವ ಜನತೆ ಕಟ್ಟಿಕೊಳ್ಳಬೇಕು, ಬದಲಾದ ಜೀವನಶೈಲಿಯಲ್ಲಿ ಮತ್ತೆ ಜಾನಪದ ವೈಭವನ್ನು ಮೈಗೂಡಿಸಿಕೊಳ್ಳಬೇಕು, ಮುಂದಿನ ಪೀಳಿಗೆಗೆ ಉತ್ತಮ ಸಂಸ್ಕಾರ, ಪೂರ್ವಜನರ ಜೀವನ ಪದ್ದತಿಯನ್ನು ಉಳಿಸಬೇಕಿದೆ ಎಂದು ನುಡಿದರು.

ಆಧುನಿಕತೆಯ ನಾಗಲೋಟದಲ್ಲಿ ಜಾನಪದರ ಸಂಪತ್ತು, ಕಲೆ, ಸುಸಂಸ್ಕೃತಿ, ಜೀವನಶೈಲಿ ಬದಲಾಗುತ್ತಿದೆ, ಅನಾಚಾರ ಮತ್ತು ಅನಾರೋಗ್ಯಕ್ಕೆ ಪಾಶ್ಚೀಮಾತ್ಯರ ಜೀವನಶೈಲಿಯ ಅನುಕರಣೆ ಕಾರಣವಾಗುತ್ತಿರುವುದು ಅರಿವಿಗೆ ಬರುತ್ತಿದೆ, ನಮ್ಮ ಮೂಲ ಜಾನಪದ ಜೀವನಪದ್ದತಿಯೇ ಸರ್ವಶ್ರೇಷ್ಠ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಹೇಶ್‌ಕುಮಾರ್ ಮತ್ತ ತಂಡದಿಂದ ವೀರಗಾಸೆ–ಪೂಜಾಕುಣಿತ–ತಮಟೆ, ಗಾಯಕ ಶ್ರೀನಿವಾಸ್ ಮತ್ತು ತಂಡದಿಂದ ದೇಶಭಕ್ತಿ, ಬಸವರಾಜು ಮತ್ತು ತಂಡದಿಂದ ಸುಮಗ ಸಂಗೀತ, ಕವಿತಾ ಮತ್ತು ತಂಡದಿಂದ ಸಮೂಹ ನೃತ್ಯ, ಶಿವಮೂರ್ತಿ ಮತ್ತು ತಂಡದಿಂದ ಜಾನಪದ ಗೀತೆ, ಶಿವಮಹದೇವ ಮತ್ತು ತಂಡದಿಂದ ದೇಶಭಕ್ತಿ ಗೀತೆ–ಗೀತಾಗಾಯನ ಕಾರ್ಯಕ್ರಮವು ನಡೆದು ಸಭಿಕರ ಮನಸೂರೆಗೊಳಿಸಿತು.

ಕಾರ್ಯಕ್ರಮದಲ್ಲಿ ಡಿಡಿಪಿಐ ಜವರೇಗೌಡ, ಗ್ರಾ.ಪಂ. ಅಧ್ಯಕ್ಷೆ ಲಕ್ಷ್ಮಮ್ಮ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಅನಿತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ಅಧಿಕಾರಿ ಉದಯಕುಮಾರ್, ಹೊಳಲು ಜಿ.ಪಂ. ಕ್ಷೇತ್ರದ ಜೆಡಿಎಸ್ ಮುಖಂಡ ಯೋಗೇಶ್, ರೈತನಾಯಕ ಮರಿಚನ್ನೇಗೌಡ, ಶಿವಶಂಕರ್, ಶ್ರೀಮಲೆಮಹದೇಶ್ವರ ಜಾನಪದ ಸುಗಮ ಸಂಗೀತ ಅಕಾಡೆಮಿ ತಂಡ ಕಾರ್ಯದರ್ಶಿ ಮಹದೇವು, ದೇವಿರಮ್ಮ ಮತ್ತಿತರರಿದ್ದರು.

ಸಕ್ರಿಯ ರಾಜಕಾರಣಕ್ಕೆ ಎಸ್.ಎಂ.ಕೃಷ್ಣ ಗುಡ್‌ಬೈ

ಮದ್ದೂರು : ತಾಲೂಕಿನ ವೈದ್ಯನಾಥಪುರದ ಶ್ರೀ ವೈದ್ಯನಾಥೇಶ್ವರ ಹಾಗೂ ಪಟ್ಟಣದ ಶ್ರೀ ಉಗ್ರನರಸಿಂಹಸ್ವಾಮಿ ದೇವಾಲಯಕ್ಕೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸೋಮವಾರ ಭೇಟಿ ನೀಡಿ ದೇವರ ದರ್ಶನ ಪಡೆದರು.

ಪಟ್ಟಣದ ಶ್ರೀಉಗ್ರನರಸಿಂಹಸ್ವಾಮಿ ದೇವಾಲಯಕ್ಕೆ ಆಗಮಿಸಿದ ಎಸ್.ಎಂ.ಕೃಷ್ಣ ಅವರು ವಿಶೇಷ ಪಾರ್ಥನೆ ಸಲ್ಲಿಸಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ತಾವು ರಾಜಕಾರಣ ಬಿಟ್ಟು ಬಹಳ ವರ್ಷಗಳಾಗಿದ್ದು ಸಾರ್ವಜನಿಕ ಜೀವನದಲ್ಲಿ ವಯೋಸಹಜವಾಗಿರುವ ಹಿನ್ನೆಲೆಯಲ್ಲಿ ತಾವು ರಾಜಕಾರಣದಿಂದ ಹಿಂದೆ ಸರಿದಿರುವುದಾಗಿ ಹೇಳಿದರು.

ಸುಮಾರು 55 ವರ್ಷಗಳ ಕಾಲ ಸುದೀರ್ಘ ರಾಜಕಾರಣದಲ್ಲಿದ್ದು ಹಲವಾರು ಅಧಿಕಾರಗಳನ್ನು ಅನುಭವಿಸಿರುವ ತಾವು ಇನ್ನೆಷ್ಟು ವರ್ಷ ಇರಲು ಸಾಧ್ಯವೆಂದು ಪತ್ರಕರ್ತರನ್ನು ಪ್ರಶ್ನಿಸಿದರು.

ನೂತನ ಮುಖ್ಯಮಂತ್ರಿಯಾಗಿರುವ ಬಸವರಾಜಬೊಮ್ಮಾಯಿ ಅವರ ತಂದೆ ತಮಗೆ ಒಳ್ಳೆಯ ಸ್ನೇಹಿತರಾಗಿದ್ದು ತಾವು ಮುಖ್ಯಮಂತ್ರಿಯಾಗಿದ್ದ ವೇಳೆ ವಿಧಾನ ಪರಿಷತ್‌ನ ಸದಸ್ಯರಾಗಿ ಸಕ್ರಿಯವಾಗಿ ಕೆಲಸ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ವಿಚಾರಗಳನ್ನು ಅಧ್ಯಯನ ಮಾಡುವ ಜತೆಗೆ ಚೈತನ್ಯಪೂರ್ಣ ವ್ಯಕ್ತಿ ಬಣ್ಣಿಸಿದರು.

ಆಡಳಿತದ ಚುಕ್ಕಾಣಿ ಹಿಡಿದಿರುವ ನೂತನ ಮುಖ್ಯಮಂತ್ರಿ ಬಸವರಾಜಬೊಮ್ಮಾಯಿ ಅವರಿಗೆ ಶುಭವಾಗಲೆಂದು ಹಾರೈಸಿದ ಅವರು ಈ ಹಿಂದೆ ಹಲವಾರು ಒಳ್ಳೆ ಕೆಲಸ ಕಾರ್ಯಗಳು ನಡೆದಿದ್ದು ಅದೇ ಮಾರ್ಗದಲ್ಲಿ ರಾಜ್ಯದೆಲ್ಲೆಡೆ ಉತ್ತಮ ಕೆಲಸ ಕಾರ್ಯಗಳು ಜರುಗಿ ಮುಖ್ಯಮಂತ್ರಿ ಅವರು ಪ್ರೇರಣಾ ಶಕ್ತಿಯಾಗಬೇಕೆಂದರು.

ಜಿಲ್ಲೆಯ ಮೈಷುಗರ್ ಸಕ್ಕರೆ ಕಾರ್ಖಾನೆ ಆರಂಭ ಸಂಬಂಧ ಪ್ರಚಲಿತ ರಾಜಕಾರಣ ಮಾಡುತ್ತಿರುವವರಿಗೆ ಬಿಡುತ್ತೇನೆಂದ ಅವರು ಮೈಷುಗರ್ ಸಕ್ಕರೆ ಕಾರ್ಖಾನೆ ಮತ್ತೆ ಆರಂಭಿಸುವ ಬಗ್ಗೆ ಕೆಲ ರೈತ ಮುಖಂಡರು ಭೇಟಿ ಮಾಡಿ ಮನವಿ ಸಲ್ಲಿಸಿದ್ದು ಈ ಬಗೆಯೂ ತಾವು ಸಹಮತ ವ್ಯಕ್ತಪಡಿಸಿದ್ದೇನೆಂದರು.

ಸರ್ಕಾರ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕೆಂದ ಅವರು ಸರ್ಕಾರ ಮತ್ತು ರೈತ ಮುಖಂಡರು ಪರಸ್ಪರ ಚರ್ಚಿಸಿ ಕೂಡಲೇ ಮೈಷುಗರ್ ಕಾರ್ಖಾನೆಯನ್ನು ಆರಂಭಿಸಿ ಜಿಲ್ಲೆಯ ರೈತರ ಹಿತ ಕಾಪಾಡಬೇಕೆಂದರಲ್ಲದೇ ನೂತನ ಸಚಿವ ಸಂಪುಟದ ಸಚಿವರು ಉತ್ತಮ ಕೆಲಸ ಕಾರ್ಯಗಳನ್ನು ಕೈಗೊಂಡು ರಾಜ್ಯದ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸಲೆಂದು ಸಲಹೆ ನೀಡಿದರು.

ಮುಜರಾಯಿ ಇಲಾಖೆಗೆ ಸೇರಿದ ಇತಿಹಾಸ ಪ್ರಸಿದ್ಧ ನರಸಿಂಹಸ್ವಾಮಿ ದೇವಾಲಯಕ್ಕೆ ಕಳೆದ ಎರಡು ವರ್ಷಗಳಿಂದಲೂ ಯಾವುದೇ ಅನುದಾನ ಬಿಡುಗಡೆ ಆಗಿಲ್ಲವೆಂಬ ವಿವರ ಪಡೆದ ಅವರು ಈ ಕುರಿತು ಸಂಬಂಧಿಸಿದ ಸಚಿವರು ಮತ್ತು ಅಧಿಕಾರಿಗಳಿಗೆ ಪತ್ರ ಬರೆಯಲಿರುವುದಾಗಿ ಮಂಜುನಾಥ್ ಅವರಿಗೆ ತಿಳಿಸಿದರು.

ಬೇಬಿ ಬೆಟ್ಟದಲ್ಲಿ 4ನೇ ದಿನವೂ ಸ್ಫೋಟಕ ಪತ್ತೆ

ಪಾಂಡವಪುರ : ತಾಲೂಕಿನ ಬೇಬಿ ಬೆಟ್ಟದಲ್ಲಿ ಕಳೆದ ಮೂರು ದಿನಗಳಿಂದ ಗಣಿಗಾರಿಕೆಗೆ ಬಳಸುವ ಸ್ಫೋಟಕಗಳಿಗಾಗಿ ತೀವ್ರ ಶೋಧ ನಡೆಸುತ್ತಿರುವ ಸ್ಫೋಟಕ ಪತ್ತೆ ಹಾಗೂ ನಿಷ್ಕ್ರೀಯ ದಳದ (ಬಿಡಿಡಿಎಸ್) ತಂಡಕ್ಕೆ ನಾಲ್ಕನೇ ದಿನವಾದ ಸೋಮವಾರವು ಸ್ಫೋಟಕಗಳು ಪತ್ತೆಯಾಗಿವೆ.

ಬೇಬಿ ಬೆಟ್ಟದ ಅಮೃತ್‌ಮಹಲ್ ಕಾವಲು ಪ್ರದೇಶ ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ಸ್ಫೋಟಕ ವಸ್ತು ಪತ್ತೆ ಕಾರ್ಯಾಚರಣೆಯು ಮುಂದುವರೆದಿದ್ದು, ತಾಲೂಕಿನ ಬನ್ನಂಬಾಡಿ ಗ್ರಾಮದ ಸರ್ವೆ ನಂ. 24ರ ಗಣಿಗಾರಿಕೆ ಪ್ರದೇಶದ ಗೋಮಾಳದಲ್ಲಿ ತಂಡ ಪರಿಶೀಲಿಸಿದ ವೇಳೆ 92 ಜಿಲೇಟಿನ್ ಕಡ್ಡಿಗಳು ಸೋಮವಾರ ಪತ್ತೆಯಾಗಿವೆ.

ವಿಷ್ಣು ಪವರ್ 90 ಬ್ರಾಂಡ್‌ನ 92 ಜಿಲೇಟಿನ್ ಟ್ಯೂಬ್ ಕೆಆರ್ ಎಸ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆಯಾಗಿವೆ.

ಆದರೆ ಈವರೆಗೂ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ.

ಬಿಜೆಪಿ ಪ್ರಕೋಷ್ಠ ಕಾರ್ಯಕಾರಿ ಸಮಿತಿ ಸಭೆ

ಮಂಡ್ಯ : ಬಿಜೆಪಿ ಜಿಲ್ಲಾ ಅನ್ಯಭಾಷಿಕರ ಪ್ರಕೋಷ್ಠ ಕಾರ್ಯಕಾರಿ ಸಮಿತಿ ಸಭೆ ನಗರದ ಬಿಜೆಪಿ ವಿಕಾಸ ಭವನದಲ್ಲಿ ಸೋಮವಾರ ನಡೆಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಜೆ. ವಿಜಯಕುಮಾರ್ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ವರ್ಗಗಳಿಗೆ ಹಲವಾರು ಯೋಜನೆಗಳನ್ನು ನೀಡಿವೆ. ಆದರೆ ಈ ಬಗ್ಗೆ ಜನಸಾಮಾನ್ಯರಿಗೆ ಅರಿವಿನ ಕೊರತೆ ಇರುವುದರಿಂದ ಬಿಜೆಪಿ ಕಾರ್ಯಕರ್ತರು ಜನರಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು ಎಂದು ಸಲಹೆ ನೀಡಿದರು.

ವಿವಿಧ ಭಾಷಿಕರ ಜನರು ನಮ್ಮ ರಾಜ್ಯದಲ್ಲೂ ಸಹ ವಾಸಿಸುತ್ತಿದ್ದಾರೆ. ಅವರು ಬದುಕು ಕಂಡುಕೊಂಡಿದ್ದಾರೆ. ಆದರೆ ಅವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸೌಲಭ್ಯಗಳು ದೊರೆಯುತ್ತಿಲ್ಲ. ಪಡೆಯುವ ನಿಟ್ಟಿನಲ್ಲೂ ಅವರು ಪ್ರಯತ್ನ ಮಾಡುತ್ತಿಲ್ಲ. ಈ ಬಗ್ಗೆ ಪ್ರಕೋಷ್ಠಗಳ ಪದಾಧಿಕಾರಿಗಳು, ಕಾರ್ಯಕರ್ತರು ಸರ್ಕಾರಿ ಸೌಲಭ್ಯಗಳಿಂದ ವಂಚಿತವಾಗಿರುವ ಸಿಳ್ಳೆಕ್ಯಾತ, ಡವರಿ, ಅಲೆಮಾರಿ, ಸುಡುಗಾಡು ಸಿದ್ದ, ಪೌರ ಕಾರ್ಮಿಕ, ಸಾಯಿ ಕರ್ಮಚಾರಿ, ಮರಾಠಿ, ಲಂಬಾಣಿ, ವಾಲ್ಮೀಕಿ, ಗುಜರಾತಿ, ಜೈನ್ಸ್ ಸೇರಿದಂತೆ ವಿವಿಧ ಸಮುದಾಯದವರಿಗೆ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಬೇಕು ಎಂದು ಕಿವಿಮಾತು ಹೇಳಿದರು.

ತಳ ಮಟ್ಟದ ಸಮುದಾಯಗಳು ಸರ್ಕಾರಿ ಸೌಲಭ್ಯಗಳಿಂದ ವಂಚಿತವಾಗಿವೆ. ಎಲ್ಲ ಸರ್ಕಾರಿ ಸೌಲಭ್ಯಗಳ ಬಗ್ಗೆ ಅವರಿಗೆ ದೊರಕಿಸಿಕೊಡುವ ಪ್ರಯತ್ನ ಮಾಡಬೇಕು. ಆಯುಷ್ಮಾನ್ ಭಾರತ್ ಯೋಜನೆ, ವಿಮಾ ಯೋಜನೆ ಸೇರಿದಂತೆ ಹಲವು ಯೋಜನೆಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಇಂಧ್ರಕುಮಾರ್, ರಾಜೇಂದ್ರ, ಮಂಜು, ಸಿ.ಪಿ.ಉಮೇಶ್. ಡಾ.ಸಿದ್ದರಾಮಯ್ಯ, ಕಿಶೋರ್, ಮಹೇಂದ್ರ, ಪ.ನಾ ಸುರೇಶ್, ನಾಗಣ್ಣಗೌಡ ಇತರರಿದ್ದರು.